ಕ್ರಮ ಸಂಖ್ಯೆ:

# ತುಮಕೂರು ವಿಶ್ವವಿದ್ಯಾನಿಲಯ

ಸ್ನಾತಕ ಮಹಿಳಾ (ಪಾವತಿ) ವಿದ್ಯಾರ್ಥಿನಿಲಯ

ವಿಶ್ವವಿದ್ಯಾನಿಲಯ ಕಲಾ ಕಾಲೇಜು, ಬಿ. ಹೆಚ್. ರಸ್ತೆ, ತುಮಕೂರು

## 2023-24 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯದ ಪ್ರವೇಶಕ್ಕಾಗಿ ಅರ್ಜಿ

| | | |
|---|---|---|
| 1. | ವಿದ್ಯಾರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ) (ಎಸ್. ಎಸ್. ಎಲ್. ಸಿ. ಅಂಕಪಟ್ಟಿಯಲ್ಲಿ ಇರುವಂತೆ) | |
| 2. | ತಂದೆ/ತಾಯಿ/ಪೋಷಕರ ಹೆಸರು:<br>ಮೊಬೈಲ್ ಸಂಖ್ಯೆ: | |
| 3. | ಪೂರ್ಣ ವಿಳಾಸ: | |
| 4. | ಹುಟ್ಟಿದ ದಿನಾಂಕ ಹಾಗೂ ವಯಸ್ಸು | |
| 5. | ಪ್ರವೇಶ ಪಡೆದಿರುವ ಕಾಲೇಜು ಮತ್ತು ದಿನಾಂಕ: | ವಿ.ವಿ. ವಿಜ್ಞಾನ ಕಾಲೇಜು<br>ವಿ.ವಿ ಕಲಾ ಕಾಲೇಜು |
| 6. | ಅಧ್ಯಯನ ವರ್ಷ & ಪದವಿ:<br>ಪ್ರಮುಖ ವಿಷಯಗಳು: | |
| 7. | ಹಿಂದಿನ ವರ್ಷದ ತರಗತಿಯಲ್ಲಿ ಉತ್ತೀರ್ಣವಾಗಿರುವ ಶ್ರೇಣಿ, ಪಡೆದ ಅಂಕಗಳು ಮತ್ತು ಶೇಕಡ (%) | |
| 8. | ತುಮಕೂರು ನಗರ/ಹತ್ತಿರದಲ್ಲಿ ವಾಸವಿರುವ ಸಂಬಂಧಿಕರ ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆ | |
| 9. | ಕಳೆದ ವರ್ಷ ವಿದ್ಯಾರ್ಥಿನಿಲಯದಲ್ಲಿ ವಾಸವಿದ್ದರೆ ಅದರ ಹೆಸರು ಮತ್ತು ವಿಳಾಸ | |
| 10. | ಮೂಲ ವಾಸಸ್ಥಳದಿಂದ ಕಾಲೇಜಿಗಿರುವ ದೂರ (ಕಿ. ಮೀ.) | |
| 11 | ವಿದ್ಯಾರ್ಥಿನಿಲಯದ ಪ್ರವೇಶಕ್ಕಾಗಿ ಜಮಾ ಮಾಡಿರುವ ಶುಲ್ಕ ರಶೀದಿ ಸಂಖ್ಯೆ ಮತ್ತು ದಿನಾಂಕ (ಆನ್ ಲೈನ್ ಮೂಲಕ ಪಾವತಿಸಿರುವ ಶುಲ್ಕದ ರಶೀದಿ ಲಗತ್ತಿಸಬೇಕು) | |
| 12 | ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆದ ದಿನಾಂಕ: | |
| 13 | ಪ್ರಾಂಶುಪಾಲರ ಖಾತೆಗೆ ಶುಲ್ಕ ಪಾವತಿಸುವ ವಿಧಾನ | UPI (Phone Pay/ Google Pay / Pay TM / Internet Banking/ Cash Deposit to Bank Account/**SBI Collect – www.ucat.ac.in** |
| 14 | ಪ್ರಾಂಶುಪಾಲರ ಖಾತೆ ಸಂಖ್ಯೆ: | 64141355048 (IFSC Code - SBIN0040850) |

ವಿದ್ಯಾರ್ಥಿನಿಲಯದ ಅರ್ಜಿ ಹಿಂಪುಟದಲ್ಲಿ ಕೊಟ್ಟಿರುವ ಎಲ್ಲಾ ನಿಯಮ ನಿಬಂಧನೆಗಳನ್ನು ಓದಿ ಅರ್ಥಮಾಡಿಕೊಂಡು ಒಪ್ಪಿ ರುಜು ಮಾಡಿರುತ್ತೇನೆ. ನನ್ನ ಯಾವುದೇ ತಪ್ಪು ಕಂಡುಬಂದಲ್ಲಿ ಮುನ್ಸೂಚನೆ ನೀಡದೆ ವಿದ್ಯಾರ್ಥಿನಿಲಯದ ಪ್ರವೇಶವನ್ನು ರದ್ದುಪಡಿಸಬಹುದೆಂಬುದಕ್ಕೆ ಬದ್ಧನಾಗಿರುತ್ತೇನೆ.

ತಮ್ಮ ವಿಶ್ವಾಸಿ

ಸ್ಥಳ:

ದಿನಾಂಕ:

ವಿದ್ಯಾರ್ಥಿಯ ಸಹಿ:

ಪೋಷಕರ ಸಹಿ:

---

ಕಚೇರಿ ಉಪಯೋಗಕ್ಕೆ

______________________ ಎಂಬ ವಿದ್ಯಾರ್ಥಿ 2022-23 ನೇ ಶೈಕ್ಷಣಿಕ ಸಾಲಿನಲ್ಲಿ ವಿ. ವಿ. ವಿಜ್ಞಾನ / ಕಲಾ ಕಾಲೇಜಿನಲ್ಲಿ ____________ ತರಗತಿಯಲ್ಲಿ ಪ್ರವೇಶ ಪಡೆದಿರುತ್ತಾನೆ.

ಪ್ರಾಂಶುಪಾಲರ ಸಹಿ ಮತ್ತು ಮೊಹರು

ನಿಲಯಪಾಲಕರ ಸಹಿ ಮತ್ತು ಮೊಹರು

Scanned with OKEN Scanner

## ಅರ್ಜಿಯೊಂದಿಗೆ ಲಗತ್ತಿಸಬೇಕಾದ ಪ್ರಮಾಣ ಪತ್ರಗಳ ಪ್ರತಿಗಳು

1. ಹಿಂದಿನ ವರ್ಷದ ಅಂಕಪಟ್ಟಿ (ಗಳು); 2. ಕಾಲೇಜಿನ ಪ್ರವೇಶ ಪಡೆದ ಶುಲ್ಕದ ರಶೀದಿ; 3. ಇತ್ತೀಚಿನ ಮೂರು (2 PP + 1 stamp size) ಭಾವ...
4. ವಿದ್ಯಾರ್ಥಿಯ ಆಧಾರ್ ಪ್ರತಿ; 5. ಪ್ರಸ್ತುತ ಕಾಲೇಜಿನ ಗುರುತಿನ ಚೀಟಿ; 6. ವಿದ್ಯಾರ್ಥಿಯ ಗುಣ ಮತ್ತು ನಡತೆಯ ಬಗ್ಗೆ ಹಿಂದಿನ ಕಾಲೇಜಿನಿಂದ ಪಡೆದ ಪತ್ರ (ಹೊಸ ವಿದ್ಯಾರ್ಥಿಗಳಿಗೆ ಮಾತ್ರ); 7. ವಿದ್ಯಾರ್ಥಿನಿಲಯಕ್ಕೆ ಆನ್ ಲೈನ್ ಮೂಲಕ ಪಾವತಿಸಿರುವ ಅರ್ಜಿ ಶುಲ್ಕದ (ರೂ. 100/- ಮಾತ್ರ) ರಶೀದಿ.

## ವಿದ್ಯಾರ್ಥಿನಿಲಯದ ನಿಮಯ ಹಾಗೂ ನಿಬಂಧನೆಗಳು

1. ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯವು ಸಂಪೂರ್ಣವಾಗಿ ಸ್ವಯಂ ಪಾವತಿ (self financed) ಆಧಾರದ ಮೇಲೆ ನಡೆಯುತ್ತದೆ. ವಿಶ್ವವಿದ್ಯಾನಿಲಯ ವಿಜ್ಞಾನ/ಕಲಾ ಕಾಲೇಜಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಅನುಮತಿ ಕೊಡಲಾಗುವುದು. ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಪ್ರವೇಶಕ್ಕೆ ಅನುಮತಿ ಕೊಡುವುದು ಅಥವಾ ನಿರಾಕರಿಸುವುದು ಪ್ರಾಂಶುಪಾಲರ/ವಿದ್ಯಾರ್ಥಿನಿಲಯ ಮೇಲ್ವಿಚಾರಣಾ ಸಮಿತಿಯ ಅಂತಿಮ ತೀರ್ಮಾನಕ್ಕೆ ಸೇರುತ್ತದೆ.
2. ಆಯ್ಕೆಯಾದ ವಿದ್ಯಾರ್ಥಿಗಳು ನಿಲಯಕ್ಕೆ ಸೇರುವಾಗ ಶುಲ್ಕ ರೂ. 20200/- ಗಳನ್ನು (ಇದರಲ್ಲಿ ತಿಂಗಳಿಗೆ ರೂ. 1700/- ರಂತೆ ಹತ್ತು ತಿಂಗಳಿಗೆ ರೂ 17000/- ; ಕೊಠಡಿಯ ಶುಲ್ಕ ತಿಂಗಳಿಗೆ ರೂ 100/- ರಂತೆ ರೂ 1000/-; ಮುಂಗಡ ಹಣ ರೂ. 1000/-; ಮತ್ತು ನಿರ್ವಹಣೆ ವೆಚ್ಚ ರೂ. 1000/- ಗಳು) ಠೇವಣಿಯಾಗಿ ಪಾವತಿಸಬೇಕಾಗಿರುತ್ತದೆ. ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ಬರುವ ಖರ್ಚುಗಳನ್ನು (ವಿದ್ಯುತ್, ನೀರು, ಭೋಜನ ಮತ್ತು ಇತರೆ) ವಿದ್ಯಾರ್ಥಿಗಳಿಗೆ ಸಮಾನವಾಗಿ ಹಂಚಲಾಗುವುದು. ಹಂಚಿಕೆ ಹಣವನ್ನು ಠೇವಣಿ ಹಣದಲ್ಲಿ ಕಡಿತಗೊಳಿಸಲಾಗುವುದು. ಒಂದು ವೇಳೆ ಪ್ರತೀ ವಿದ್ಯಾರ್ಥಿಯ ವಾರ್ಷಿಕ ಖರ್ಚು ಸದರಿ ಹಣವನ್ನು ಮೀರಿದ್ದಲ್ಲಿ, ಹೆಚ್ಚುವರಿ ವೆಚ್ಚವನ್ನು ವಿದ್ಯಾರ್ಥಿಗಳು ಪಾವತಿಸಬೇಕಾಗುತ್ತದೆ. ಒಟ್ಟಾರೆ ಶುಲ್ಕವನ್ನು ಒಂದೇ ಕಂತಿನಲ್ಲಿ ಪಾವತಿಸುವುದು. ಒಂದೇ ಕಂತಿನಲ್ಲಿ ಪಾವತಿಸಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಮೂರು ತಿಂಗಳ ಕಾಲಾವಕಾಶ ಮಾತ್ರ ನೀಡಲಾಗುವುದು. ಮೂರು ತಿಂಗಳೊಳಗಾಗಿ ಉಳಿಕೆ ಶುಲ್ಕವನ್ನು ಪಾವತಿಸತಕ್ಕದ್ದು.
3. ಪ್ರವೇಶ ಪಡೆದ ದಿನದಿಂದ 6 ತಿಂಗಳೊಳಗಾಗಿ ವಿದ್ಯಾರ್ಥಿಯು ವಿದ್ಯಾರ್ಥಿನಿಲಯವನ್ನು ಬಿಟ್ಟರೆ ರೂ 1200/- ಗಳ ದಂಡವನ್ನು ಭರಿಸಬೇಕಾಗುತ್ತದೆ ಅಲ್ಲದೇ ಮುಂಗಡ ಹಣವನ್ನು ಶೈಕ್ಷಣಿಕ ವರ್ಷದ ನಂತರ ಹಿಂತಿರುಗಿಸಲಾಗುವುದು.
4. ನನ್ನ ಮಗಳು ಇನ್ನಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲವೆಂದೂ ಹಾಗೂ ಒಂದು ವೇಳೆ ಪಾಲ್ಗೊಂಡಲ್ಲಿ ಅವನ ವಿರುದ್ಧ ನಿಯಮಾನುಸಾರ ಯಾವುದೇ ಶಿಕ್ಷೆ ವಿಧಿಸಿದರೂ ಬದ್ಧವಾಗಿರುತ್ತೇವೆಂದು ವಿದ್ಯಾರ್ಥಿ ಹಾಗೂ ಪೋಷಕರು ಮುಚ್ಚಳಿಕೆ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸುವುದು. ಮುಂದುವರೆದು, ಯಾವುದೇ ರೀತಿಯಲ್ಲೂ ಹೊರಗಿನವರನ್ನು ನಿಲಯಕ್ಕೆ ಕರೆತರುವಂತಿಲ್ಲ. ಹೊರಗಿನವರನ್ನು ಕರೆತರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ ನೀಡಿರುವ ಪ್ರವೇಶಾತಿಯನ್ನು ರದ್ದುಪಡಿಲಾಗುವುದು.
5. ವಿದ್ಯಾರ್ಥಿಗಳು ತಮ್ಮ ವಸ್ತುಗಳಿಗೆ ತಾವುಗಳೇ ಜವಾಬ್ದಾರರಾಗಿರುತ್ತಾರೆ ಹಾಗೂ ತಮ್ಮ ವಸ್ತುಗಳಿಗೆ ವಿದ್ಯಾರ್ಥಿನಿಲಯದ ಅಧಿಕಾರಿಗಳು ಜವಾಬ್ದಾರರಾಗಿರುವುದಿಲ್ಲ. ವಿದ್ಯಾರ್ಥಿಗಳು ನಿಲಯದೊಳಗೆ ಪ್ರವೇಶಿಸುವಾಗ ಅಥವಾ ವಿದ್ಯಾರ್ಥಿನಿಲಯದ ಅಧಿಕಾರಿಗಳು ಕೇಳಿದಾಗ ನಿಲಯದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತೋರಿಸಬೇಕಾಗುತ್ತದೆ. ವಿದ್ಯಾರ್ಥಿನಿಲಯದ ಸಿಬ್ಬಂದಿಗಳೊಂದಿಗೆ ಉಚಿತ ನಡವಳಿಕೆಯನ್ನು ತೋರತಕ್ಕದ್ದು.
6. ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯನ್ನು ಧರಿಸಿ, ಸ್ವಸಹಾಯ ಪದ್ಧತಿಯಲ್ಲಿ, ನಿಗದಿತ ಸಮಯದಲ್ಲಿ (ಬೆಳಗಿನ ಉಪಹಾರ: 7.30 ರಿಂದ 9.00 ರ ವರೆಗೆ; ಮಧ್ಯಾಹ್ನದ ಊಟ: 12.30 ರಿಂದ 2.00 ರ ವರೆಗೆ; ಹಾಗೂ ರಾತ್ರಿ ಊಟ: 7.30 ರಿಂದ 8.30 ರ ವರೆಗೆ) ಭೋಜನಾಲಯದಲ್ಲಿ ಮಾತ್ರ ಆಹಾರ ಸ್ವೀಕರಿಸಬಹುದಾಗಿರುತ್ತದೆ. ಆಹಾರವನ್ನು ತಮ್ಮ ಕೊಠಡಿಗೆ ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ. ಕೊಠಡಿಗೆ ತೆಗೆದುಕೊಂಡು ಹೋದಲ್ಲಿ ಅಥವಾ ಹೊರಗಿನವರಿಗೆ ಸರಬರಾಜು ಮಾಡಿದಲ್ಲಿ ಸೂಕ್ತ ದಂಡ ತೆರಬೇಕಾಗುತ್ತದೆ.
7. ಕೊಠಡಿಯಲ್ಲಿ ವಿದ್ಯುಚ್ಛಕ್ತಿಯನ್ನು ಅಧ್ಯಯನಕ್ಕೆ ಮಾತ್ರ ಉಪಯೋಗಿಸಬೇಕು. ಬೇರೆ ಇನ್ನಾವುದೇ ಕಾರ್ಯಗಳಿಗೆ ಉಪಯೋಗಿಸಿದರ ಅಂತಹ ವಿದ್ಯಾರ್ಥಿಗಳಿಗೆ 500 ರೂ ಗಳಂತೆ ದಂಡ ವಿಧಿಸಲಾಗುವುದು ಅಲ್ಲದೇ ಅವರ ಪ್ರವೇಶಾತಿಯನ್ನು ರದ್ದುಗೊಳಿಸಲಾಗುವುದು. ಗ್ಯಾಸ್ ಅಥವಾ ವಿದ್ಯುತ್ ಉಪಕರಣಗಳನ್ನು ನಿಲಯದಲ್ಲಿ ಉಪಯೋಗಿಸಲು ಅವಕಾಶವಿರುವುದಿಲ್ಲ ಹಾಗೂ ಅನುಮತಿ ಇಲ್ಲದೆ ದಾಸ್ತಾನು ಕೊಠಡಿ/ಅಡುಗೆ ಕೊಠಡಿಗಳಿಗೆ ಪ್ರವೇಶವಿರುವುದಿಲ್ಲ.
8. ವಿದ್ಯಾರ್ಥಿಗಳು ತಮ್ಮ ಕೊಠಡಿಯಲ್ಲಿ ಹಾಗೂ ವಿದ್ಯಾರ್ಥಿನಿಲಯದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳತಕ್ಕದ್ದು. ಮುಂದುವರೆದು, ವಿದ್ಯಾರ್ಥಿನಿಲಯದ ಸ್ವಚ್ಛತೆ ಮತ್ತು ಇನ್ನಿತರ ಕೆಲಸಗಳಿಗಾಗಿ ವಾರಕ್ಕೆ ಕನಿಷ್ಠ ಎರಡು ಗಂಟೆಗಳ ಶ್ರಮದಾನ ಮಾಡುವುದು. ವಿದ್ಯಾರ್ಥಿನಿಲಯದಲ್ಲಿ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.
9. ವಿದ್ಯಾರ್ಥಿಗಳು ರಜೆಯ ಮೇಲೆ ಹೋಗುವಾಗ ನಿಲಯಪಾಲಕರಿಗೆ ರಜೆ ಪತ್ರವನ್ನು ತಪ್ಪದೇ ಕಡ್ಡಾಯವಾಗಿ ನೀಡಿ ಹೋಗಬೇಕಾಗಿರುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಮಾತ್ರ (15 ದಿನಗಳಿಗಿಂತ ಹೆಚ್ಚು ದಿನ ಹೋದಾಗ ಮಾತ್ರ) ಮಾಹೆಯಾನ ಬರುವ ವೆಚ್ಚದಲ್ಲಿ ರಜೆಯ ಅವಧಿಗೆ ಹಂಚಿಕೆ ಮಾಡುವುದಿಲ್ಲ.
10. ವಿದ್ಯಾರ್ಥಿಗಳು ಹೋಗುವ/ಬರುವ ದಿನಾಂಕ ಹಾಗೂ ಸಮಯವನ್ನು ಭದ್ರತಾ ಸಿಬ್ಬಂದಿಯ ಹತ್ತಿರ ಇರುವ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು. ವಿದ್ಯಾರ್ಥಿನಿಯರು ಸಂಜೆ 6.30 ರೊಳಗಾಗಿ ವಿದ್ಯಾರ್ಥಿನಿಲಯದೊಳಗೆ ಇರತಕ್ಕದ್ದು. ತುರ್ತು ಸಂದರ್ಭದಲ್ಲಿ ನಿಲಯಪಾಲಕರ ಪೂರ್ವಾನುಮತಿ ಪಡೆದು ವಿದ್ಯಾರ್ಥಿನಿಲಯದೊಳಗೆ ಪ್ರವೇಶಿಸತಕ್ಕದ್ದು.

ಶ್ರೀ ____________________ ಆದ ನಾನು ಈ ಮೇಲ್ಕಂಡ ಅಂಶಗಳನ್ನೆಲ್ಲಾ ಓದಿ ಸರಿ ಎಂದು ತಿಳಿದು ಒಪ್ಪಿಗೆಯೊಂದಿಗೆ ರುಜು ಮಾಡಿರುತ್ತೇನೆ. ನನ್ನ ಮಗನ ನಡವಳಿಗೆಗೆ ನಾನು ಜವಾಬ್ದಾರನಾಗಿರುತ್ತೇನೆ. ನನ್ನ ಮಗನ ಮೇಲೆ ಕೈಗೊಳ್ಳುವ ಎಲ್ಲಾ ರೀತಿಯ ಶಿಸ್ತಿನ ಕ್ರಮಕ್ಕೂ ನಾನು ಸಂಪೂರ್ಣವಾಗಿ ಬದ್ಧನಾಗಿರುತ್ತೇನೆ.

ದಿನಾಂಕ

ಸ್ಥಳ:

ತಂದೆ/ತಾಯಿ/ಪೋಷಕರ ಸಹಿ

### ಕಾನೂನೂ ಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತಂದೆ/ತಾಯಿ/ಪೋಷಕರ ಮುಚ್ಚಳಿಕೆ ಪತ್ರ

ಶ್ರೀ/ಶ್ರೀಮತಿ ____________________ ಆದ ನಾನು ____________________ ಎಂಬ ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರಾಗಿದ್ದು, ನಾನು ಹಾಗೂ ನನ್ನ ಮಗಳು ಕಾನೂನು ಬಾಹಿರ ಚಟುವಟಿಕೆಗಳ ಕುರಿತು ಹಾಗೂ ಈ ಸಂಬಂಧ ಸರ್ವೋಚ್ಚ ನ್ಯಾಯಾಲಯ ಮತ್ತು ಕೇಂದ್ರ/ರಾಜ್ಯ ಸರ್ಕಾರಗಳ ನಿರ್ದೇಶನಗಳನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇವೆ.. ತತ್ಸಂಬಂಧದ ಯು.ಜಿ.ಸಿ. ನಿಯಮಗಳನ್ನೂ ಸಹ ಅರ್ಥ ಮಾಡಿಕೊಂಡಿರುತೇವೆ: ನನ್ನ ಮಗ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲವೆಂದು ಹಾಗೂ ಒಂದು ವೇಳೆ ಪಾಲ್ಗೊಂಡಲ್ಲಿ ಅವನ ವಿರುದ್ಧ ವಿಶ್ವವಿದ್ಯಾನಿಲಯ/ ಕಾಲೇಜು/ ಯು.ಜಿ.ಸಿ. ನಿಯಮಾನುಸಾರ ಯಾವುದೇ ಶಿಕ್ಷೆ ವಿಧಿಸಿದರೂ ಬದ್ಧವಾಗಿರುವುದಾಗಿ ಈ ಮೂಲಕ ಒಪ್ಪಿ ಸಹಿ ಮಾಡಿರುತ್ತೇವೆ.

ವಿದ್ಯಾರ್ಥಿಯ ಸಹಿ

ತಂದೆ/ತಾಯಿ/ಪೋಷಕರ ಸಹಿ

ಮೊಬೈಲ್ ಸಂಖ್ಯೆ:

ಹೆಸರು ಮತ್ತು ವಿಳಾಸ:

ಪ್ರಾಂಶುಪಾಲರ ಸಹಿ ಮತ್ತು ಮೊಹರು

Scanned with OKEN Scanner